15 - 13 - 14

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:27-08-2014ರ ನಡವಳಿಗಳು

ವಿಷಯದ ಸಂಖ್ಯೆ: ವಾಕಾಸ್ಥಾಸ/154/2014-15

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಯಲಹಂಕ ವಲಯದ ಬ್ಯಾಟರಾಯನಪುರ ವಿಭಾಗದ ಕೊಡಿಗೇಹಳ್ಳಿ ಉಪ ವಿಭಾಗ ವ್ಯಾಪ್ತಿಯ ವಾರ್ಡ್ ನಂ.8 ರ ವ್ಯಾಪ್ತಿಗೆ ಸೇರಿದ ಅಂಕೋ ಬಡಾವಣೆ, ಡಿ-ಎನ್‌ಕ್ಲೇವ್, ಶಾಂತಿವನ, ಬಿ.ಬಿ.ನಗರ, ಸಹಕಾರನಗರ ಸಿ.ಬ್ಲಾಕ್‌ವರೆಗೆ ಇತ್ತಿಚೆಗೆ ಬೆಂಗಳೂರು ಜಲ ಮಂಡಳಿಯಿಂದ ಒಳಚರಂಡಿಯ ಕೊಳವೆ ಬಾವಿಗಳನ್ನು ಅಳವಡಿಸಿ ಮ್ಯಾನ್ ಹೋಲ್‌ಗಳನ್ನು ನಿರ್ಮಿಸಿರುತ್ತಾರೆ. ಈ ಕಾರಣದಿಂದಾಗಿ ರಸ್ತೆಯು ಸುಗಮ ಸ್ಥಿತಿಯಲ್ಲಿ ಇರದ ಕಾರಣ ಮಳೆ ಬಂದಾಗ ಮಳೆ ನೀರು ಸರಾಗವಾಗಿ ಹರಿದು ಹೋಗದೆ ಮನೆಗಳಿಗೆ ನೀರು ನುಗ್ಗಿ ಅನಾಹುತ ಸಂಭವಿಸುವ ಕಾರಣ ಚರಂಡಿಗಳಲ್ಲಿ ಹೂಳು ತೆಗೆಯುವುದು, ಚರಂಡಿ ದುರಸ್ತಿ, ರಸ್ತೆ ಅಭಿವೃದ್ಧಿ, ರಾಜಕಾಲುವೆಗೆ ಸೇರಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸ್ಥಳೀಯ ಪಾಲಿಕೆ ಸದಸ್ಯರು ಹಾಗೂ ಆಡಳಿತ ಪಕ್ಷದ ನಾಯಕರು ಮನವಿ ಸಲ್ಲಿಸಿರುವ ಮೇರೆಗೆ ಸಂಬಂಧಪಟ್ಟ ಅಭಿಯಂತರರು ಸ್ಥಳ ಪರಿಶೀಲನೆ ನಡೆಸಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕಾಮಗಾರಿಯನ್ನು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮೂಲಕ ನಿರ್ವಹಿಸಲು ಮುಖ್ಯ ಅಭಿಯಂತರರು ಮತ್ತು ಅಪರ ಆಯುಕ್ತರು (ಯಲಹಂಕ)ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕ್ರ.ಸ	ಕಾಮಗಾರಿಯ ಹೆಸರು	ಮೊತ್ತ ರೂ ಲಕ್ಷಗಳಲ್ಲಿ
1	Estimate for improvements of roads and drain in low lying area of Bhadrappa layout Handigudu main and cross roads in ward No.8, under flood relief fund	47.30
2	Estimate for improvements of roads and drain in low lying area of Bhadrappa layout Maruthi nagara at 9th main and cross road and 10rh cross road in ward No.08 under flood relief fund	40.70
3	Estimate for improvements of roads in low lying area of Balaji Layout at 4th cross and 6th main road in ward No.8, under flood relief fund	12.00

ಟೆಂಡರ್ ಪ್ರಕ್ರಿಯೆ ಕೈಗೊಳ್ಳದೇ ಈ ಕಾಮಗಾರಿಯನ್ನು ಮೆ:ಕೆ.ಆರ್.ಐ.ಡಿ.ಎಲ್. ಗೆ ವಹಿಸಲು ಮುಖ್ಯ ಅಭಿಯಂತರರು ಮತ್ತು ಜಂಟಿ ಆಯುಕ್ತರು(ಯಲಹಂಕ)ರವರು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಹಾಗೂ ಆಯುಕ್ತರ ಅದೇಶದಂತೆ ಸೂಕ್ತ ನಿರ್ಣಯಕ್ಕಾಗಿ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:26/08/2014ರ ಟಿಪ್ಪಣಿ.

ನಿರ್ಣಯ:

ವಿಶೇಷ ಆಯುಕ್ತರು(ಯೋಜನೆ)ರವರು ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ಹಾಜರಿದ್ದ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು. ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿ ತುರ್ತು ಕಾಮಗಾರಿಯಾಗಿರುವುದರಿಂದ ಸರ್ಕಾರಿ ಸ್ವಾಮ್ಯದ ಮೆ:ಕೆ.ಆರ್.ಐ.ಡಿ.ಎಲ್. ಪತಿಯಿಂದ ನಿರ್ವಹಿಸುವುದೆಂದು ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಕಾಮಗಾರಿಯನ್ನು ಮೆ;ಕೆ.ಆರ್.ಐ.ಡಿ.ಎಲ್. ಪತಿಯಿಂದ ನಿರ್ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

ಎ.ಹೆಚ್.ಬಸವರಾಜು
ಅಧ್ಯಕ್ಷರು
ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕ್ರಮ ಸಂಖ್ಯೆ	ಶ್ರೀಯುತರ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
1	ಎ.ಹೆಚ್.ಬಸವರಾಜು	ಅಧ್ಯಕ್ಷರು	ಎ.ಹೆಚ್.ಬಸವರಾಜು

2	ರಂಗಣ್ಣ. ಕೆ	ಸದಸ್ಯರು	K. Rangonna
3	ಸುಗುಣ ಬಾಲಕೃಷ್ಣ	ಸದಸ್ಯರು	Suguna Balakrishna
4	ತಿಮ್ಮರಾಜು	ಸದಸ್ಯರು	
5	ಸರಸ್ವತಮ್ಮ	ಸದಸ್ಯರು	Saraswathamma
6	ಕೆ. ನಂದಿನಿ ಶ್ರೀನಿವಾಸ್	ಸದಸ್ಯರು	K. Nandini
7	ಆಶಾ ಸುರೇಶ್	ಸದಸ್ಯರು	S. Asha
8	ಎಸ್.ಕೆ.ಪುಷ್ಪ	ಸದಸ್ಯರು	S.K. Pushpa.
9	ಶಾಹಿನ್ ತಾಜ್	ಸದಸ್ಯರು	
10	ಜ್ಯೋತಿಶ್ರೀ ಹರಿರೆಡ್ಡಿ	ಸದಸ್ಯರು	Jyothisri Harireddy
11	ಅಶ್ವಥ ನಾರಾಯಣ ಜಿ.ಎ	ಸದಸ್ಯರು	

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರವರ ಕಛೇರಿ, ಯಲಹಂಕ ವಲಯ, ಬ್ಯಾಟರಾಯನಪುರ, ಬೆಂಗಳೂರು –92

ಸಂಖ್ಯೆ:ಬಿಬಿಎಂಪಿ/ಕಾ.ಪಾ.ಅ(ಬ್ಯಾ.ಪು.ವಿ)/ಪಿಆರ್/117/2014–15 ದಿನಾಂಕ:26–8–2014

ಬೃಹತ್ ಬೆಂಗಳೂರು ಮಹಾನರ ಪಾಲಿಕೆ ವಾರ್ಡ್ ಅಭಿವೃದ್ದಿ ಕಾಮಗಾರಿಗಳ ಸ್ಥಾಯಿ ಸಮಿತಿಯ ಮುಂದೆ ನಿರ್ಣಯಕ್ಕಾಗಿ ಮಂಡಿಸಲಾದ ಟಿಪ್ಪಣಿ

ವಿಷಯ: 2014–15ನೇ ಸಾಲಿನಲ್ಲಿ ಮಳೆಯ ಅನುಹುತಗಳನ್ನು ತಪ್ಪಿಸಲು ತುರ್ತು ಕಾಮಗಾರಿಗಳು, ಹಾಗೂ ರಾಜ ಕಾಲುವೆಗಳ ದುರಸ್ಥಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್ ಮುಖಾಂತರ ದುರಸ್ಥಿ ಪಡಿಸಲು ನಿರ್ಣಯಕ್ಕಾಗಿ ಮಂಡಿಸಲಾದ ಟಿಪ್ಪಣಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯದ ಬ್ಯಾಟರಾಯನಪುರ ವಿಭಾಗದ ಕೊಡಿಗೇಹಳ್ಳಿ ಉಪವಿಭಾಗ ವ್ಯಾಪ್ತಿಯ ವಾರ್ಡ್ ನಂ. 08 ರ ವ್ಯಾಪ್ತಿಗೆ ಸೇರಿದ ಆಂಕೋ ಬಡಾವಣೆ, ಡಿ–ಎನ್‌ಕ್ಲೇವ್, ಶಾಂತಿವನ, ಬಿ.ಬಿ.ನಗರ, ಸಹಕಾರನಗರ ಸಿ ಬ್ಲಾಕ್‌ವರೆಗೆ ಇತ್ತೀಚೆಗೆ ಬೆಂಗಳೂರು ಜಲಮಂಡಳಿಯಿಂದ ಒಳಚರಂಡಿಯ ಕೊಳವೆಬಾವಿಗಳನ್ನು ಅಳವಡಿಸಿ ಮ್ಯಾನ್ ಹೋಲ್‌ಗಳನ್ನು ನಿರ್ಮಿಸಿರುತ್ತಾರೆ ಈ ಕಾರಣದಿಂದಾಗಿ ರಸ್ತೆಯು ಸುಗಮ ಸ್ಥಿತಿಯಲ್ಲಿ ಇರದ ಕಾರಣ ಮಳೆ ಬಂದಾಗ ಮಳೆ ನೀರು ಸರಾಗವಾಗಿ ಹರಿದು ಹೋಗದೆ ಮನೆಗಳಿಗೆ ನೀರು ನುಗ್ಗಿ ಅನಾಹುತ ಸಂಭವಿಸುವ ಕಾರಣ ಚರಂಡಿಗಳಲ್ಲಿ ಹೂಳು ತೆಗೆಯುವುದು, ಚರಂಡಿ ದುರಸ್ಥಿ, ರಸ್ತೆ ಅಭಿವೃದ್ದಿ, ರಾಜಕಾಲುವೆಗೆ ಸೇರಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸ್ಥಳೀಯ ಪಾಲಿಕೆ ಸದಸ್ಯರು ಹಾಗೂ ಆಡಳಿತ ಪಕ್ಷದ ನಾಯಕರು ಮನವಿ ಸಲ್ಲಿಸಿರುವ ಮೇರೆಗೆ ಸಂಬಂಧಪಟ್ಟ ಅಭಿಯಂತರರು ಸ್ಥಳ ಪರಿಶೀಲನೆ ನಡೆಸಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಈ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮೂಲಕ ನಿರ್ವಹಿಸಲು ಮುಖ್ಯ ಅಭಿಯಂತರರು ಮತ್ತು ಅಪರ ಆಯುಕ್ತರು (ಯಲಹಂಕ)ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

	ಕಾಮಗಾರಿ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ)
01	Estimate for Improvemtns of roads and drain in low lying area of Bhadrappa layout Handigudu main and cross roads in ward no. 08 under flood relief fund. ಕಾಮಗಾರಿ ಸಂಕೇತ ಸಂಖ್ಯೆ: 008–15–000013	47.30
02	Estimate for Iprovements of road in low lying area of Bhadrappa layout Maruthi nagara at 9th main and cross road and 10th cross road in ward no08 under flood relief fund. ಕಾಮಗಾರಿ ಸಂಕೇತ ಸಂಖ್ಯೆ: 008–15–000012	40.70
03	Estimate for Improvements of road in low lying area of Balaji layout at 4th cross and 6th main road in ward no.08 under flood relief fund. ಕಾಮಗಾರಿ ಸಂಕೇತ ಸಂಖ್ಯೆ: 008–15–000014	12.00

ಟೆಂಡರ್ ಪ್ರಕ್ರಿಯೆ ಕೈಗೊಳ್ಳದೇ ಈ ಕಾಮಗಾರಿಯನ್ನು ಮೆ॥ ಕೆ.ಆರ್.ಐ.ಡಿ.ಎಲ್.ಗೆ ವಹಿಸಲು ಮುಖ್ಯ ಅಭಿಯಂತರರು ಮತ್ತು ಜಂಟಿ ಆಯುಕ್ತರು (ಯಲಹಂಕ)ರವರು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಹಾಗೂ ಆಯುಕ್ತರ ಆದೇಶದಂತೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಸೂಕ್ತ ನಿರ್ಣಯಕ್ಕಾಗಿ ಟಿಪ್ಪಣಿ ಮಂಡಿಸಿದೆ.

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.